C.R.P.67
Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ ನಂ 39/2021

ದಿನಾಂಕಃ 11.06.2024. ರಂದು ಪ್ರಮಾಣ ವಚನ ಬೋಧಿಸಲಾಗಿದೆ
ಸಿ. ಡಬ್ಲ್ಯೂ : 22 ಪಿ. ಡಬ್ಲ್ಯೂ : 17

| | |
|---|---|
| ಸಾಕ್ಷಿದಾರರ ಹೆಸರು | ಕೆ ಕಾಳಯ್ಯ |
| ತಂದೆಯ ಹೆಸರು | ಕಾಳಶೆಟ್ಟಿ |
| ವಯಸ್ಸು | 54 ವರ್ಷ |
| ಉದ್ಯೋಗ | ಎಎಸ್ಐ, ಕೆರೆಗೋಡು ಪೊಲೀಸ್ ಠಾಣೆ. |
| ವಾಸ | ಕೆರೆಗೋಡು. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

1) ನಾನು 2019 ಜೂನ್ ರಿಂದ 2021 ಆಗಸ್ಟ್ ರವರೆಗೆ ಹೆಚ್‌ಸಿ.109 ಆಗಿ ಮಂಡ್ಯ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ದಿಃ 30.09.2020 ರಂದು ಮಂಡ್ಯ ಪಶ್ಚಿಮ ಪೊಲೀಸ್ ಠಾಣೆ ಮೊಕದ್ದಮೆ ನಂಃ 105/2020 ಪ್ರಕರಣದ ತನಿಖಾಧಿಕಾರಿಯಾದ ಎಎಸ್ಐ ವೆಂಕಟಾಚಲ ರಾವ್ ಚಾಸಾ.24 ರವರು ನನ್ನನ್ನು ಅವರ ಜೊತೆ ತನಿಖಾ ಸಹಾಯಕನಾಗಿ ಕರೆದುಕೊಂಡು ಹೋಗಿ ಈ ಕೇಸ್ ನ ಪಿರ್ಯಾದಿ ತಿರುಮಲ ರವರು, ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದು, ನಾನು ಸ್ಥಳ ಮಹಜರ್ ನ್ನು ಎಎಸ್ಐ ಚಾಸಾ.24 ರವರ ಉಕ್ತಲೇಖನದ ಮೇರೆಗೆ ನನ್ನ ಕೈ ಬರವಣಿಗೆಯಲ್ಲಿ ಬರೆದಿರುತ್ತೇನೆ. ಈ ಮಹಜರ್ ಕ್ರಮವನ್ನು ಮ. 2.15 ರಿಂದ 3.15 ರವರೆಗೆ ಜರುಗಿಸಲಾಯಿತು. ಕೃತ್ಯ ನಡೆದ ಸ್ಥಳವು ಮಂಡ್ಯದ ಮರೀಗೌಡ ಬಡಾವಣೆಯ 2 ನೇ ಕ್ರಾಸ್ ಮನೆ ನಂಃ ಕೆಟಿಃ 200 ಆಗಿತ್ತು. ಮಹಜರ್ ಸಮಯದಲ್ಲಿ, ತನಿಖಾಧಿಕಾರಿಯಾದ ಚಾಸಾ 24, ನಾನು, ಪಂಚರಾದ ಗಗನ್ ಮತ್ತು ರಾಘು ಇದ್ದೆವು. ಮಹಜರ್ ಕಾಲದಲ್ಲಿ, ಸ್ಥಳದಲ್ಲಿ ಇದ್ದ ಒಂದು ದಿಂಡು ಗಲ್ಲು, ರಕ್ತದ ಕಲೆ ಇತ್ತು, ಮತ್ತು ಒಂದು ರಕ್ತದ ಕಲೆ ಇರುವ ಕಬ್ಬಿಣದ ಹಿಡಿಕೆ ಇರುವ ಮಚ್ಚು, ರಕ್ತದ ಕಲೆ ಇರುವ ಎರಡು ದೊಣ್ಣೆಗಳು, ರಕ್ತದ ಕಲೆ ಇದ್ದ ಮರದ ಹಿಡಿಕೆ ಇರುವ ಎರಡು ಕುಡುಗೋಲು ಮತ್ತು ಸ್ಥಳದಲ್ಲಿ ಇದ್ದ ಒಂದು ಸಾದಾ ಮಣ್ಣು ಮತ್ತು ರಕ್ತ ಮಿಶ್ರಿತ ಮಣ್ಣನ್ನು ಅಮಾನತ್ತು ಪಡಿಸಿಕೊಂಡೆನು. ಪಂಚನಾಮೆಗೆ

ಸ್ಥಳವನ್ನು ಪಿರ್ಯಾದಿ ತೋರಿಸಿದರು. ಪಿರ್ಯಾದಿ, ಮೇಲೆ ಹೇಳಿದ ವಸ್ತುಗಳಿಂದ, ಇದೇ ಆಯುಧಗಳಿಂದ ನನ್ನ ತಂದೆ ಸ್ವಾಮಿ ಮತ್ತು ನನಗೆ ಆರೋಪಿಗಳು ಹಲ್ಲೆ ಮಾಡಿದರು ಎಂದು ತಿಳಿಸಿದರು. ಈ ಎಲ್ಲಾ ವಸ್ತುಗಳನ್ನು ನ್ಯಾಯಾಲಯದಲ್ಲಿ ಈಗ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ತೋರಿಸಿದ ಮು.ಮಾ1 ರಿಂದ 8 ವಸ್ತುಗಳನ್ನು ನೋಡಿ ಗುರುತಿಸಿದ್ದಾರೆ. ಈಗ ನನಗೆ ತೋರಿಸುತ್ತಿರುವ ನಿಪಿ.2 ಮಹಜರ್ ನನ್ನ ಕೈ ಬರಹದಲ್ಲಿದ್ದು, ಹಾಗೂ ಇದರಲ್ಲಿ ಇರುವ ನನ್ನ ಸಹಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.2(ಡಿ)ಎಂದು ಗುರುತಿಸಲಾಯಿತು. ಪಂಚನಾಮೆ ಕಾಲದಲ್ಲಿ ಫೋಟೋವನ್ನು ಸ್ಟೇಷನ್ ಕ್ಯಾಮರಾದಿಂದ ನಾನೇ ತೆಗೆದಿರುತ್ತೇನೆ. ಸದರಿ ನಿಪಿ.3 ರಿಂದ 10 ಫೋಟೋಗಳನ್ನು ಈಗ ನೋಡಿ ಗುರುತಿಸಿರುತ್ತೇನೆ.

3) ಅದೇ ದಿನ ದಿಃ30.09.2020 ರಂದು ಈ ಪ್ರರಕಣದ 2 ನೇ ಆರೋಪಿ ಶ್ರೀನಿಧಿ ಕೃತ್ಯ ನಡೆದ ಸಮಯದಲ್ಲಿ ಧರಿಸಿದ್ದಂತಹ ರಕ್ತದ ಕಲೆ ಇರುವ ಪ್ಯಾಂಟ್ ನ್ನು ಜಪ್ತಿ ಪಡಿಸಿಕೊಂಡಿದ್ದು, ಇದರ ಅಮಾನತ್ತು ಪಂಚನಾಮೆಯನ್ನು ನಾನು ಕೈ ಬರಹದಲ್ಲಿ ಬರೆದಿರುತ್ತೇನೆ. ಸದರಿ ಮಹರನ್ನು ರಾತ್ರಿ 10.45 ರಿಂದ 11.15 ಗಂಟೆ ವರೆಗೆ ಠಾಣಾ ಕಂಪ್ಯೂಟರ್ ಕೊಠಡಿಯಲ್ಲಿ ಜರುಗಿಸಿರುತ್ತೇನೆ. ಮಹಜರ್ ಆಗುವಾಗ ನಾನು, ಚಾಸಾ.24, ಪಂಚರಾದ ರಾಘು, ಗಗನ್ ಮತ್ತು 2 ನೇ ಆರೋಪಿ ಶ್ರೀನಿಧಿ ಇದ್ದೆವು. 2 ನೇ ಆರೋಪಿ ಶ್ರೀನಿಧಿ, ನೀಲಿ ಬಣ್ಣದ ನೈಟ್ ಪ್ಯಾಂಟ್ ನ್ನು ನಮಗೆ ಹಾಜರು ಪಡಿಸಿದ್ದರು. ಇದನ್ನು ಈಗ ನ್ಯಾಯಾಲಯದ ಮುಂದೆ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುಮಾ12. ನೀಲಿ ಬಣ್ಣದ ನೈಟ್ ಪ್ಯಾಂಟ್ ನ್ನು ನೋಡಿ ಗುರುತಿಸಿರುತ್ತಾರೆ. ಈಗ ಸದರಿ ನಿಪಿ.19 ಮಹಜರನ್ನು ನೋಡುತ್ತಿದ್ದು , ಇದರಲ್ಲಿ ಇರುವ ನನ್ನ ಸಹಿಯನ್ನು ನಿಪಿ.19(ಸಿ)ಎಂದು ಗುರುತಿಸಲಾಯಿತು. ಮಹಜರ್ ಕಾಲದಲ್ಲಿ ತೆಗೆದ ಫೋಟೋವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಪಿ.23 ರಿಂದ 26 ಫೋಟೋಗಳನ್ನು ನೋಡಿ ಗುರುತಿಸುತ್ತಾರೆ.

4) ದಿಃ 01.10.2020 ರಂದು ಈ ಕೇಸ್ ನ 1 ನೇ ಆರೋಪಿ ಶಂಕರ ರವರು, ಕೃತ್ಯ ನಡೆದ ಸಮಯದಲ್ಲಿ ಧರಿಸಿದ್ದಂತಹ ರಕ್ತದ ಕಲೆ ಇದ್ದಂತಹ ಒಂದು ಸಿಮೆಂಟ್ ಕಲರ್ ಪ್ಯಾಂಟನ್ನು ಹಾಜರು ಪಡಿಸಿದಾಗ, ಅದನ್ನು ಚಾಸಾ 24 ತನಿಖಾಧಿಕಾರಿಯವರು ಮಹಜರ್ ಮೂಲಕ ಜಪ್ತಿ ಮಾಡಿಕೊಂಡರು. ಸದರಿ ಅಮಾನತ್ತು ಮಹಜರ್ ನ್ನು ಮಧ್ಯಾಹ್ನ 2.30 ರಿಂದ 3.15 ಗಂಟೆ ವರೆಗೆ ನಾನು ನನ್ನ ಕೈಬರವಣಿಗೆಯಲ್ಲಿ ಬರೆದಿರುತ್ತೇನೆ. ಹಾಗೂ ಸದರಿ ಮಹಜರ್ ಕ್ರಮ

ಜರುಗಿಸಿದ್ದನ್ನು, ಠಾಣೆಯ ಕ್ಯಾಮಾರದಿಂದ ಫೋಟೋವನ್ನು ತೆಗೆಸಿದೆನು. ಸದರಿ ಪಂಚನಾಮೆ ಕಾಲದಲ್ಲಿ, 1 ನೇ ಆರೋಪಿ ಶಂಕರ್, ಚಾಸಾ.24, ನಾನು, ಪಂಚರಾದ ರಾಘು ಮತ್ತು ಗಗನ್ ಇದ್ದೆವು. ಸದರಿ ನಿಪಿ.20 ಪಂಚನಾಮೆ ಕಾಲದಲ್ಲಿ ಜಪ್ತಿ ಮಾಡಿದ ಈ ಮೇಲೆ ಹೇಳಿದ ವಸ್ತುವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುಮಾ.14 ರಕ್ತದ ಕಲೆ ಇದ್ದಂತಹ ಒಂದು ಸಿಮೆಂಟ್ ಕಲರ್ ಪ್ಯಾಂಟನ್ನು ನೋಡಿ ಗುರುತಿಸಿರುತ್ತಾರೆ. ನಿಪಿ.20 ಮಹಜರ್ ಗೆ ನಾನು ಸಹಿ ಮಾಡಿದ್ದು, ನನ್ನ ಸಹಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.20(ಸಿ)ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸುತ್ತಿರುವ ನಿಪಿ.27 ರಿಂದ ನಿಪಿ.30 ಫೋಟೋಗಳನ್ನು ನೋಡಿ ಗುರುಸಿರುತ್ತೇನೆ.

5) ಅದೇ ದಿನ ದಿಃ01.10.2020 ರಂದು, 1 ನೇ ಆರೋಪಿ ಶಂಕರ, 2 ನೇ ಆರೋಪಿ ಶ್ರೀನಿಧಿ, 5 ನೇ ಆರೋಪಿ ಲಕ್ಷ್ಮೀ, 7 ನೇ ಆರೋಪಿ ಗೀತಾ ಇವರುಗಳಿಂದ ಕೃತ್ಯ ನಡೆದ ಸ್ಥಳವನ್ನು ಗುರುತಿಸಿಕೊಂಡು ಅಲ್ಲಿ ಜರುಗಿಸಿದಂತಹ ನಿಪಿ.22 ಮಹಜರನ್ನು ನನ್ನ ಕೈಬರಹದಲ್ಲಿ ಬರೆದಿರುತ್ತೇನೆ, ಆಗ ಸಮಯ ಮಧ್ಯಾಹ್ನ 3.30 ರಿಂದ ಸಂಜೆ 4.30 ಗಂಟೆವರೆಗೆ ಬರೆಯಲಾಯಿತು. ಸದರಿ ಮಹಜರ್ ಗೆ ನಾನು ಸಹಿ ಹಾಕಿದ್ದು, ನನ್ನ ಸಹಿಯನ್ನು ನಿಪಿ.22(ಸಿ) ಎಂದು ಗುರುತಿಸಲಾಯಿತು. ಮೇಲೆ ಹೇಳಿದ ಆರೋಪಿತರನ್ನು ಈಗ ನ್ಯಾಯಾಲಯದಲ್ಲಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿ ಶ್ರೀನಿಧಿ, 4 ನೇ ಆರೋಪಿ ಭಾಗ್ಯ, 5 ನೇ ಆರೋಪಿ ಲಕ್ಷ್ಮೀ, 6 ನೇ ಆರೋಪಿ ಪುಟ್ಟೀರಮ್ಮ, 7 ನೇ ಆರೋಪಿ ಗೀತಾ ರವರನ್ನು ನೋಡಿ ಗುರುತಿಸುತ್ತಾರೆ. 1 ನೇ ಆರೋಪಿ ಶಂಕರ ಈ ದಿನ ನ್ಯಾಯಾಲಯಕ್ಕೆ ಬಂದಿಲ್ಲದೇ ಇರುವ ಕಾರಣ, ಆತನನ್ನು ಗುರುತಿಸಲು ಆಗಿರುವುದಿಲ್ಲ. ಆದರೆ ಸಾಕ್ಷಿಯು, ನಿಪಿ.27 ರಿಂದ 30 ಫೋಟೋಗಳಲ್ಲಿ ಇರುವ 1 ನೇ ಆರೋಪಿ ಶಂಕರ ನ್ನು ನೋಡಿ ಗುರುತಿಸಿರುತ್ತಾರೆ.

6) ದಿಃ 06.10.2020 ರಂದು ಈ ಕೇಸ್ ನ ಪಿರ್ಯಾದಿ ತಿರುಮಲ ರವರು, ತಿರುಮವಲ ಮತ್ತು ಅವರ ತಂದೆ ಸ್ವಾಮಿ ರವರಿಗೆ ಹಲ್ಲೆಯಾಗಿದ್ದಾಗ, ಮೈ ಮೇಲೆ ಧರಿಸಿದ್ದ ಬಟ್ಟೆಗಳನ್ನು ತಂದು ಪಿರ್ಯಾದಿ ಪಿಎಸ್ಐ ರವರ ಕೊಠಡಿಯಲ್ಲಿ, ಚಾಸಾ 24 ರವರ ಮುಂದೆ ಹಾಜರು ಪಡಿಸಿದರು. ಹಾಜರು ಪಡಿಸಿದ್ದ ಸಮಯದಲ್ಲಿ ಅಮಾನತ್ತು ಮಹಜರನ್ನು ಜರುಗಿಸಲಾಯಿತು, ಸದರಿ ಮಹಜರನ್ನು ನಾನು ಪಿಎಸ್ಐ ರವರ ಉಕ್ತಲೇಖನದಲ ಮೇರೆಗೆ ನಾನ ನನ್ನ ಕೈ ಬರಹದಲ್ಲಿ ಬರೆದಿರುತ್ತೇನೆ. ಸದರಿ ಮಹಜರನ್ನು ಬೆಳಗ್ಗೆ 8 ರಿಂದ 9.00 ಗಂಟೆ ವರೆಗೆ ಮಾಡಲಾಯಿತು. ಮಹಜರ್ ಕಾಲದಲ್ಲಿ ರಕ್ತದ ಕಲೆ ಇದ್ದ ಎರಡು ಬನಿಯನ್, ಎರಡು ನೈಟ್ ಪ್ಯಾಂಟ್ ಮತ್ತು ಒಂದು ಕಲರ್ ಟೀ

ಶರಟನ್ನು ಹಾಜರು ಪಡಿಸಿದರು. ಇವುಗಳ ಪೈಕಿ ಒಂದು ಬಿಳಿ ಬಣ್ಣದ ಸ್ಯಾಂಡ್ರೋ ಬನಿಯನ್ ರಕ್ತದ ಕಲೆ ಇರುತ್ತದೆ, ಇದು ಗಾಯಾಳು ಸ್ವಾಮಿಯದ್ದಾಗಿದ್ದು, ಒಂದು ಸಿಮೆಂಟ್ ಕಲರ್ ಪ್ಯಾಂಟ್ ಇದ್ದು, ಇದಕ್ಕೆ ಎರಡೂ ಕಡೆ ಕೇಸರಿ ಬಣ್ಣದ ಗೆರೆ ಇತ್ತು, ಇದು ಸಹ ಗಾಯಾಳು ಸ್ವಾಮಿಯದ್ದಾಗಿರುತ್ತದೆ.ಪಿರ್ಯಾದಿ ತಂದು ಹಾಜರು ಪಡಿಸಿದ ಎಲ್ಲಾ ಬಟ್ಟೆಗಳನ್ನು ನ್ಯಾಯಾಲಯದಲ್ಲಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿ ಸದರಿ ಮು.ಮಾ.9, 10, 11, 13 ಮತ್ತು 15 ಬಟ್ಟೆಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ನಿಪಿ.11 ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಇದರಲ್ಲಿ ಇರುವ ನನ್ನ ಸಹಿಯನ್ನು ನಿಪಿ.11(ಡಿ)ಎಂದು ಗುರುತಿಸಲಾಯಿತು. ನಿಪಿ. 11 ಪಂಚನಾಮೆಗೆ, ನಾನು, ತನಿಖಾಧಿಕಾರಿ ಚಾಸಾ 24, ಪಂಚರಾದ ಶರತ್, ಜಯಣ್ಣ ಮತ್ತು ಪಿರ್ಯಾದಿ ತಿರುಮಲ ಸಹಿ ಮಾಡಿದ್ದೆವು. ನಿಪಿ.11 ಪಂಚನಾಮೆ ಕಾಲದಲ್ಲಿ ಜರುಗಿಸಿದ ಮಹಜರ್ ನ್ನು ನಮ್ಮ ಠಾಣಾ ಕ್ಯಾಮರಾದಿಂದ ಫೋಟೋಗಳನ್ನು ತೆಗೆದಿರುತ್ತೇನೆ. ಸದರಿ ನಿಪಿ.12 ರಿಂದ 17 ಫೊಟೋಗಳನ್ನು ನೋಡಿ ಗುರುತಿಸಿರುತ್ತಾರೆ.

7) ದಿಃ23.10.2020 ರಂದು ಈ ಪ್ರಕರಣದಲ್ಲಿ ತಲೆ ಮರೆಸಿಕೊಂಡಿದ್ದ 3 ನೇ ಆರೋಪಿ ಸಿದ್ದಪ್ಪ ಮತ್ತು 8 ನೇ ಆರೋಪಿ ವೀರಭದ್ರ ರವರ ಪತ್ತೆ ಕಾರ್ಯಕ್ಕೆ ನನ್ನನ್ನು ಮತ್ತು ಠಾಣಾ ಪಿಸಿ.99 ರವರನ್ನು ನೇಮಕ ಮಾಡಿದ್ದು, ಅದೇ ದಿನ ಗಾಯಾಳು ಸ್ವಾಮಿ ರವರು, ಬೆಂಗಳೂರು ಕೋಣನಕುಂಟೆಯಲ್ಲಿ ಇರುವಂತಹ ಅಸ್ತ್ರ ಆಸ್ಪತ್ರೆಯಲ್ಲಿ ಹೊರರೋಗಿಯಾಗಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳು ಸ್ವಾಮಿರವರ ಹೇಳಿಕೆಯನ್ನು, ವೈದ್ಯಾಧಿಕಾರಿಯನ್ನು ಭೇಟಿ ಮಾಡಿ, ಗಾಯಾಳು ಹೇಳಿಕೆ ಕೊಡುವ ಸ್ತಿತಿಯಲ್ಲಿ ಇದ್ದರೆ, ವೈದ್ಯಧಿಕಾರಿ ಮುಂದೆ ಹೇಳಿಕೆ ಪಡೆದುಕೊಂಡು ಬರುವಂತೆ, ಒಂದು ಮನವಿ ಪತ್ರವನ್ನು ನನ್ನ ಮೂಲಕ ಕಳುಹಿಕೊಟ್ಟಿದ್ದರು. ಅದರಂತೆ ನಾವು ಠಾಣೆಯಿಂದ ಹೊರಟು, ಮೊದಲನೆಯದಾಗಿ, ಆರೋಪಿಗಳ ಪತ್ತೆ ಬಗ್ಗೆ ಕೆಂಗೇರಿ, ಕೋಡಿಪಾಳ್ಯ, ವಿಶ್ವೇಶ್ವರಯ್ಯ ನಗರ, ಸುಬ್ರಮಣ್ಯ ನಗರ, ವಸಂತ ನಗರ, ಸೆನ್ ಸಿಟಿ ಮುಂತಾದ ಕಡೆಗಳಲ್ಲಿ ಗಸ್ತು ಮಾಡಿ, ಅಲ್ಲಿನ ಬಾತ್ಮಿದಾರರು ಮತ್ತು ಸಾರ್ವಜನಿಕರನ್ನು ಭೇಟಿ ಮಾಡಿ, ಈ ಕೇಸ್ನ ಬಗ್ಗೆ ಅವರಿಗೆ ಮಾಹಿತಿ ತಿಳಿಸಿ, ಆರೋಪಿಗಳ ಪತ್ತೆ ಬಗ್ಗೆ, ಪ್ರಯತ್ನ ಮಾಡಲಾಗಿ, ಆರೋಪಿಗಳು ಪತ್ತೆಯಾಗಲಿಲ್ಲ. ನಂತರ, ಅಲ್ಲಿಂದ ಕೋಣದಕುಂಟೆಯಲ್ಲಿ ಇರುವಂತಹ ಅಸ್ತ್ರ ಆಸ್ಪತ್ರೆಗೆ ಹೋಗಿ ಅಲ್ಲಿನ ವೈದ್ಯಾಧಿಕಾರಿಯನ್ನು ಭೇಟಿ ಮಾಡಿ, ಠಾಣೆಯಿಂದ ಕೊಟ್ಟಂತಹ ಮನವಿ ಪತ್ರವನ್ನು ವೈದ್ಯಾಧಿಕಾರಿಗೆ ಕೊಟ್ಟಿರುತ್ತೇನೆ. ಅಲ್ಲಿನ ವೈದ್ಯಾಧಿಕಾರಿಗಳು, ಗಾಯಾಳು ಸ್ವಾಮಿ ರವರಿಗೆ, ದವಡೆಗೆ ಜಾಸ್ತಿ ಏಟಾಗಿದೆ, ಅವರು ಮಾತನಾಡಲು ಆಗುವುದಿಲ್ಲ, ಅವರ ಹೇಳಿಕೆಯನ್ನು ಕೊಡಲು ಆಗುವುದಿಲ್ಲ ಎಂದು ಒಂದು ಪತ್ರವನ್ನು ಕೊಟ್ಟಿರುತ್ತಾರೆ. ಅಲ್ಲಿಂದ ವಾಪಸ್ ಪೊಲೀಸ್ ಠಾಣೆಗೆ ಬಂದು, ಆರೋಪಿ

ಪತ್ತೆ ಬಗ್ಗೆ ಹೋಗಿದ್ದ ಬಗ್ಗೆ ವರದಿಯನ್ನು ನೀಡಿದ್ದು ಮತ್ತು ಅಸ್ತ್ರ ಆಸ್ಪತ್ರೆ ವೈದ್ಯಾಧಿಕಾರಿಗಳು ಬರೆದುಕೊಟ್ಟಿದ್ದಂತಹ ಪತ್ರವನ್ನು ಠಾಣೆಗೆ ತನಿಖಾಧಿಕಾರಿಯವರಿಗೆ ಹಾಜರು ಪಡಿಸಿರುತ್ತೇನೆ. ತಲೆ ಮರೆಸಿಕೊಂಡಿದ್ದ ಆರೋಪಿಗಳು ಪತ್ತೆ ಆಗದೆ ಇರುವ ಬಗ್ಗೆ ನೀಡಿದ ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.66 ಎಂದು, ಅದರಲ್ಲಿ ಇರುವ ನನ್ನ ಸಹಿಯನ್ನು ನಿಪಿ.66(ಎ)ಎಂದು ಗುರುತಿಸಲಾಯಿತು. ಆರೋಪಿತರ ಪತ್ತೆ ಬಗ್ಗೆ ನನಗೆ ನೀಡಿದ ರಹದಾರಿ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.67 ಎಂದು ಗುರುತಿಸಲಾಯಿತು. ಅಸ್ತ್ರ ಆಸ್ಪತ್ರೆಯಿಂದ ವೈದ್ಯಾಧಿಕಾರಿಯವರು, ಗಾಯಾಳು ಸ್ವಾಮಿ ಹೇಳಿಕೆ ನೀಡುವ ಸ್ತಿತಿಯಲ್ಲಿ ಇಲ್ಲ ಎಂದು ನೀಡಿದ ಪತ್ರವನ್ನು ಈಗ ನೋಡುತ್ತಿದ್ದು, ಇದನ್ನು ಈಗಾಗಲೇ ನಿಪಿ.63 ಎಂದು ಗುರುತಿಸಲಾಗಿರುತ್ತದೆ. ಇದರಲ್ಲಿ ಇರುವ ನನ್ನ ಸ್ವೀಕೃತಿ ಸಹಿಯನ್ನು ನಿಪಿ.63(ಎ) ಎಂದು ಗುರುತಿಸಲಾಯಿತು.

8) ದಿಃ 06.10.2020 ರಂದು ನಮ್ಮ ಠಾಣೆಯಿಂದ ತನಿಖಾಧಿಕಾರಿಯವರು ಪತ್ರವನ್ನು ಮಾಡಿ, ಈ ಪ್ರಕರಣದ ಗಾಯಾಳು ಸ್ವಾಮಿ ರವರ ರಕ್ತದ ಗುಂಪನ್ನು ಪರೀಕ್ಷಿಸಿ ವರದಿಯನ್ನು ಪಡೆದುಕೊಂಡು ಬರುವಂತೆ, ಅಸ್ತ್ರ ಆಸ್ಪತ್ರೆಗೆ ನನ್ನನ್ನು ನೇಮಿಸಿ ನನ್ನ ಮೂಲಕ ಕಳುಹಿಸಿಕೊಟ್ಟಿದ್ದರು. ನಿಪಿ.50 ಪತ್ರವನ್ನು ಈಗ ನೋಡುತ್ತಿದ್ದೇನೆ. ಅದೇ ದಿವಸ ಅಸ್ತ್ರ ಆಸ್ಪತ್ರೆಯಿಂದ ನಿಪಿ.51 ರಂತೆ ವರದಿಯನ್ನು ತನಿಖಾಧಿಕಾರಿಯವರಿಗೆ ತಂದು ಹಾಜರು ಪಡಿಸಿರುತ್ತೇನೆ. ತನಿಖಾ ಕಾಲದಲ್ಲಿಲ ನಾನು ಠಾಣೆಯಲ್ಲಿ ತೆಗೆದಿದ್ದ ಮಹಜರ್ ಕ್ರಮದ ಫೋಟೋಗಳನ್ನು ತೆಗೆದಿದ್ದ ಬಗ್ಗೆ ನೀಡಿರುವ ಕಲಂ 65(ಬಿ) Indian Evidence Act ಅಡಿಯಲ್ಲಿ ಪ್ರಮಾಣ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ.68 ಎಂದು ಗುರುತಿಸಲಾಯಿತು. ಇದರಲ್ಲಿ ಇರುವ ನನ್ನ ಸಹಿಯನ್ನು ನಿಪಿ.68(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಬಿ. ಆರ್.ವಿ. ವಕೀಲರಿಂದ ಃ</u>

1) ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ತನಿಖೆಗೆ ನೀವು ಬರಬೇಕು, ನಿಮ್ಮನ್ನು ನೇಮಕ ಮಾಡಿದ್ದೇವೆ ಎಂದು ತನಿಖಾಧಿಕಾರಿಯವರು ನನಗೆ ನೇಮಕಾತಿ ಪತ್ರವನ್ನು ಕೊಟ್ಟಿರಲಿಲ್ಲ. ನನ್ನನ್ನು ತನಿಖೆಗೆ ಬರಬೇಕು ಅಂತ ತನಿಖಾಧಿಕಾರಿಯವರು ನನಗೆ ಸೂಚಿಸಿದಾಗ, ನಾನು ಠಾಣೆಯಲ್ಲೇ ಇದ್ದೆನು. ನನ್ನನ್ನು ತನಿಖಾಧಿಕಾರಿಯವರು ಜೊತೆಯಲ್ಲಿ ಕರೆದುಕೊಂಡು ಠಾಣೆಯಿಂದ ಹೊರಡುವ ಕಾಲದಲ್ಲಿ, ಪಿರ್ಯಾದಿದಾರರು ಠಾಣೆಗೆ ಬಂದಿದ್ದರು. ಆಗ ಸಮಯ ಸುಮಾರು ಮಧ್ಯಾಹ್ನ 2.00 ಗಂಟೆಯಾಗಿತ್ತು. ಪಂಚರನ್ನು ಕರೆತಂದವರು ಯಾರು ಎಂದು ನನಗೆ ಗೊತ್ತಿಲ್ಲ. ನಮ್ಮ ತನಿಖಾಧಿಕಾರಿಯವರಿಗೆ ಗೊತ್ತಿದೆ. ಪಂಚರಿಗೆ ನೋಟಿಸನ್ನು, ಸ್ಥಳಕ್ಕೆ ಪಂಚರನ್ನು

ಕರೆಸಿಕೊಂಡು, ಆಮೇಲೆ ಅವರಿಗೆ ನೋಟಿಸನ್ನು ಜಾರಿ ಮಾಡಿದರು. ನಾನು ಮತ್ತು ತನಿಖಾಧಿಕಾರಿಯವರು ಸ್ಥಳಕ್ಕೆ ಹೋಗುವುದಕ್ಕೆ ಮುಂಚೆಯೇ, ಪಂಚರು ಸ್ಥಳದಲ್ಲಿ ಇದ್ದರಾ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿಯು, ನಾವು ಸ್ಥಳಕ್ಕೆ ಹೋದ ಮೇಲೆ ತನಿಖಾಧಿಕಾರಿಯವರು ಪಂಚರನ್ನು ಸ್ಥಳಕ್ಕೆ ಕರೆಸಿಕೊಂಡರು ಎಂದು ಹೇಳುತ್ತಾರೆ. ನಾನು ಮತ್ತು ನಮ್ಮ ತನಿಖಾಧಿಕಾರಿಯವರು ಸ್ಥಳಕ್ಕೆ ಹೋದಾಗ ಸಮಯ ಮಧ್ಯಾಹ್ನ 2.10 ನಿಮಿಷ ಆಗಿತ್ತು. ನಾವು ಸ್ಥಳಕ್ಕೆ ಹೋದ ಕಾಲಕ್ಕೂ ಮತ್ತು ಪಂಚರವನ್ನು ಕರೆಸಿಕೊಳ್ಳುವ ಕಾಲಕ್ಕೂ 5 ನಿಮಿಷ ಅಂತರ ಇತ್ತು. ಪಿರ್ಯಾದಿ ತಿರುಮಲ ರವರು ನಮಗೆ ಸ್ಥಳವನ್ನು ತೋರಿಸಿಕೊಟ್ಟರು. ಆ ಕಾಲಕ್ಕೆ ಪಿರ್ಯಾದಿಯ ಕೈಗೆ ಏಟಾಗಿತ್ತು, ಬ್ಯಾಂಡೇಜ್ ನ್ನು ಹಾಕಿಕೊಂಡಿರಲಿಲ್ಲ.

2) ಕೃತ್ಯ ನಡೆದ ಸ್ಥಳದಿಂದ ಸಾರ್ವಜನಿಕರು ತಿರುಗಾಡುವ ಸ್ಥಳಕ್ಕೆ ಎಷ್ಟು ದೂರ ಇತ್ತು ಎಂದು ನಾನು ಗಮನಿಸಲಿಲ್ಲ. ಮಹಜರ್ ಕಾಲದಲ್ಲಿ, ತನಿಖಾಧಿಕಾರಿಯವರು, ನನಗೆ ಹೇಳಿದ್ದನ್ನು ಬಿಟ್ಟರೇ ಬೇರೆ ಏನನ್ನು ನಾನು ಗಮನಿಸಿಲ್ಲ ಎಂದರೆ ಸರಿಯಲ್ಲ. ಚಿಕ್ಕೀರಮ್ಮ ವಾಸ ಮಾಡುತ್ತಿರುವ ಮನೆ, ದಕ್ಷಿಣಾಭಿಮುಖವಾಗಿ ಬಾಗಿಲು ಇದೆ. ಉತ್ತರಕ್ಕೆ ಇರುವ ಮನೆಯಲ್ಲಿ ಯಾರು ವಾಸ ಮಾಡುತ್ತಿದ್ದಾರೆ ಎಂದು ನಾನು ಗಮನಿಸಲಿಲ್ಲ. ಯಾವ ಯಾವ ಆಯುಧಗಳು, ಯಾವ ದಿಕ್ಕಿನಲ್ಲಿ ಇತ್ತು ಎಂದು ನಾನು ಸರಿಯಾಗಿ ಗಮನಿಸಲಿಲ್ಲ. ಚಿಕ್ಕೀರಮ್ಮ ವಾಸ ಮಾಡುತ್ತಿದ್ದ ಮನೆ, ಆರ್.ಸಿ.ಸಿ ಮನೆ. ವಸ್ತುಗಳನ್ನು ಗುರುತಿಸಿದ ಕಾಲಕ್ಕೆ, ನನ್ನ ಸಹಿಗಳನ್ನು ಅವುಗಳ ಮೇಲೆ ಪಡೆದುಕೊಳ್ಳಲಿಲ್ಲ. 2 ನೇ ಕ್ರಾಸ್ ಮರೀಗೌಡ ಬಡಾವಣೆಗೂ ಮತ್ತು ನಮ್ಮ ಪಶ್ಚಿಮ ಪೊಲೀಸ್ ಠಾಣೆಗೂ ಸುಮಾರು 1 ವರೆ ಕಿ.ಮೀ ಆಗುತ್ತದೆ. ಆರ್.ಸಿ.ಸಿ ಮನೆಯ ಮೆಟ್ಟಿಲುಗಳು, ಪೂರ್ವ ದಿಕ್ಕಿಗೆ ಇತ್ತು. ವಾಸ ಮಾಡುತ್ತಿದ್ದ ಮನೆಗೂ ಮತ್ತು ಖಾಲಿ ನಿವೇಶನಕ್ಕೂ ಎಷ್ಟು ದೂರ ಇದೆ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿಯು, ವಾಸ ಮಾಡುವ ನಿವೇಶನದ ಪೂರ್ವಕ್ಕೂ ಅವರ ಖಾಲಿ ಜಾಗ ಇದೆ, ಅದು ಮುಂದುವರೆದು ಬೇರೆ ಯಾರದೋ ವಾಸದ ಮನೆ ಇದೆ. ಪೂರ್ವ, ಉತ್ತರ ದಕ್ಷಿಣಕ್ಕೆ ಅದೇ ನಿವೇಶನದ ಖಾಲಿ ಜಾಗ ಇದೆ. ಉತ್ತರಕ್ಕೆ ಮುಂದುವರೆದಂತೆ ಬೇರೆ ಮನೆ ಇದೆ. ದಕ್ಷಿಣಕ್ಕೆ ಮುಂದುವರೆದಂತೆ ರಸ್ತೆ ಇದೆ. ಪಿರ್ಯಾದಿಯವರ ವಾಸದ ಮನೆಯ ಸಾಲಿನಲ್ಲಿ ಮತ್ತು ಎದುರಿನಲ್ಲಿ ಬೇರೆಯವರ ವಾಸದ ಮನೆಗಳು ಇವೆ ಎಂದರೆ ಸರಿ.

3) ಮಹಜರ್ ಕ್ರಮ ಜರುಗಿಸಿದಾಗ ತೆಗೆದ ನಿಪಿ.5 ಮತ್ತು 6 ಫೋಟೋಗಳಲ್ಲಿ, ಪಿರ್ಯಾದಿ ಗಾಯಾಳು ತಿರುಮಲ ಯಾವುದೇ ಬ್ಯಾಂಡೇಜ್ ನ್ನು ಕೈಗೆ ಹಾಕಿಸಿಕೊಂಡಿದ್ದಾಗಲೀ ಅಥವಾ ಚಿಕಿತ್ಸೆ ಪಡೆದುಕೊಂಡಿದ್ದಾಗಲೀ ಈ ಫೋಟೋಗಳಲ್ಲಿ ಕಂಡು ಬರುವುದಿಲ್ಲ ಎಂದರೆ ಸರಿ. ಕಲ್ಲು

ಎಷ್ಟು ಅಂತರದಲ್ಲಿ ಬಿದ್ದಿತ್ತು ಎಂದು ನಾನು ಗಮನಿಸಲಿಲ್ಲ. ಕಲ್ಲುಗಳು ಮತ್ತು ದೊಣ್ಣೆಗಳು ಬಿದ್ದ ಸ್ಥಳದ ಅಂತರವನ್ನು ನಾನು ಗುರುತಿಸಲಿಲ್ಲ. ಯಾರ ಮನೆ ಮುಂದೆ ಕಲ್ಲುಗಳು ಬಿದ್ದಿತ್ತು, ಯಾರ ಮನೆ ಮುಂದೆ ದೊಣ್ಣೆ ಬಿದ್ದಿತ್ತು ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿಯು, ಗಾಯಾಳು ಸ್ವಾಮಿ ವಾಸ ಇದ್ದ ಮನೆಯ ಮುಂಭಾಗದಲ್ಲಿ ಕುಡಗೋಲು ಮತ್ತು ಕಲ್ಲು ಬಿದ್ದಿತ್ತು. 6 ನೇ ಆರೋಪಿ ಪುಟ್ಟೀರಮ್ಮ ವಾಸ ಇದ್ದ ಮನೆಯ ಮುಂದೆ ದೊಣ್ಣೆಗಳು ಬಿದ್ದಿದ್ದವು. ನಾನು ಮತ್ತು ತನಿಖಾಧಿಕಾರಿಯು, ಸ್ಥಳಕ್ಕೆ ಹೋಗುವುದಕ್ಕೆ ಮುಂಚೆ, ಬೇರೆ ಯಾರು ಅಲ್ಲಿಗೆ ಭೇಟಿ ಕೊಟ್ಟಿರಲಿಲ್ಲ. ಪಿರ್ಯಾದಿ ತಿರುಮಲ ರವರು ಎಲ್ಲಿಂದ ಬಂದರು ಅಂತ ನಾನು ಅವರನ್ನು ಕೇಳಲಿಲ್ಲ. ಮಹಜರ್ ನಲ್ಲಿ, ಇಂತಹ ವಸ್ತುಗಳನ್ನು ನೋಡಿದೆನು, ಇಂತಹ ಸ್ಥಳದಲ್ಲಿ ಬಿದ್ದಿತ್ತು ಎಂಬ ವಿಷಯವನ್ನು ಬರೆದಿಲ್ಲ ಎಂದರೆ ಸರಿ. ಕೃತ್ಯ ನಡೆದ ಸ್ಥಳಕ್ಕೆ ನಾನು ಹೋಗಿರಲಿಲ್ಲ ಎಂದರೆ ಸರಿಯಲ್ಲ ಮತ್ತು ಎಎಸ್ಐ ರವರು ಹೇಳಿದ ಪ್ರಕಾರ ನಾನು ನನ್ನ ಕೈ ಬರಹದಲ್ಲಿ ಮಹಜರನ್ನು ಬರೆದಿರಲ್ಲಿ ಎಂದರೆ ಸರಿಯಲ್ಲ. ಸ್ಥಳದಲ್ಲಿ ಮುದ್ದೇಮಾಲುಗಳನ್ನು ವಶಪಡಿಸಿ ಕೊಂಡಿರಲಿಲ್ಲ ಎಂದರೆ ಸರಿಯಲ್ಲ.

4) ಮಹಜರ್ ಕಾಲದಲ್ಲಿ ತೆಗೆದಿದ್ದ ಫೋಟೋಗಳ ಕ್ಯಾಮರಾ ಯಾವ ಕಂಪನಿಯದುಎಂದು ಗಮನಿಸಲಿಲ್ಲ. ನಿಪಿ.68 ಕಲಂ 65(ಬಿ) Indian Evidence Act ಅಡಿಯಲ್ಲಿ ಪ್ರಮಾಣ ಪತ್ರದಲ್ಲಿ ಯಾವ ಕ್ಯಾಮಾರದಿಂದ ಫೋಟೋವನ್ನು ತೆಗೆದಿದ್ದೇನೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ಯಾವ ಯಾವ ದಿನಾಂಕದಂದು, ಯಾವ ಯಾವ ಫೋಟೋಗಳನ್ನು ತೆಗೆದಿದ್ದೆನು ಎನ್ನುವುದನ್ನು ನಮೂದಿಸಿಲ್ಲ ಎಂದರೆ ಸರಿ.

ಬೆಳಗಿನ ನ್ಯಾಯಾಲಯದ ಕಲಾಪದ ಅವಧಿ ಮುಕ್ತಾಯಗೊಂಡಿದ್ದರಿಂದ, ಮಧ್ಯಾಹ್ನಕ್ಕೆ ಮುಂದೂಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

ದಿನಾಂಕಃ 11.06.2024. ರಂದು ಮಧ್ಯಾಹ್ನ ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಗಿದೆ

ಮುಂದುವರೆದ ಪಾಟೀ ಸವಾಲುಃಆರೋಪಿತರ ಪರ ಶ್ರೀ ಬಿ.ಆರ್.ವಿ.ವಕೀಲರಿಂದ ಃ

1) ನಿಪಿ.68 ಕಲಂ 65(ಬಿ) Indian Evidence Act ಅಡಿಯಲ್ಲಿ ಪ್ರಮಾಣ ಪತ್ರವನ್ನು ನಾನು ದೃಢೀಕರಿಸಿ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಯಾದ ಶ್ರೀನಿಧಿಯನ್ನು ಯಾವಾಗ ದಸ್ತಗಿರಿ ಮಾಡಿದ್ದರು ಅಂತ ನನ್ನ ಗಮನಕ್ಕೆ ಬರಲಿಲ್ಲ, ಕಾರಣ ಅದು ನನ್ನ ವ್ಯಾಪ್ತಿಗೆ ಬರುವುದಿಲ್ಲ. ಚಾಸಾ.24 ಎಎಸ್ಐ ರವರು, 2 ನೇ ಆರೋಪಿಯಾದ ಶ್ರೀನಿಧಿ ಯವರ ಬಟ್ಟೆಗಳನ್ನು ಅಮಾನತ್ತು ಪಡಿಸಿಕೊಳ್ಳುವ ಮಹಜರ್ ನ್ನು ನಿಮ್ಮ ಕೈ ಬರಹದಲ್ಲಿ ಬರೆಯಬೇಕು ಅಂತ ನನಗೆ ಸೂಚಿಸಿದಾಗ ಸಮಯ ರಾತ್ರಿ 10.30 ಗಂಟೆಯಾಗಿತ್ತು. 2 ನೇ ಆರೋಪಿ ಶ್ರೀನಿಧಿ, ಮೈ ಮೇಲಿಂದ ಬಟ್ಟೆಯನ್ನು ತೆಗೆದು ಕೊಡುವ ಫೋಟೋವನ್ನು ನಾನು ತೆಗೆಯಲಿಲ್ಲ. 2 ನೇ ಆರೋಪಿ ಶ್ರೀನಿಧಿಗೆ ಬದಲಿ ಬಟ್ಟೆಯನ್ನು ತಂದು ಕೊಟ್ಟವರು ಯಾರು ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿಯು, ಇದು ನನ್ನ ಗಮನದಲ್ಲಿ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ಮಹಜರ್ ಕ್ರಮದ ಫೋಟೋವನ್ನು ನಾನು ತೆಗೆದಿರಲಿಲ್ಲ ಎಂದರೆ ಸರಿಯಲ್ಲ ಹಾಗೂ ಮಹಜರನ್ನು ನನ್ನ ಕೈ ಬರಹದಲ್ಲಿ ನಾನು ಬರೆದಿಲ್ಲ ಎಂದರೆ ಸರಿಯಲ್ಲ. ನೈಟ್ ಪ್ಯಾಂಟ್ ಬಟ್ಟೆ ಮೇಲೆ ನನ್ನ ಸಹಿಯನ್ನು ತೆಗೆದುಕೊಂಡಿಲ್ಲ. ನನ್ನ ಸಮಕ್ಷಮದಲ್ಲಿ, ಯಾವುದೇ ಅಮಾನತ್ತು ಮಹಜರನ್ನು ನನ್ನ ಕೈಯಿಂದ ಬರೆಸಿಲ್ಲ ಎಂದರೆ ಸರಿಯಲ್ಲ ಹಾಗೂ 2 ನೇ ಆರೋಪಿಯಿಂದ ಯಾವುದೇ ಬಟ್ಟೆಯನ್ನು ತೆಗೆದುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಅಮಾನತ್ತು ಮಹಜರ್ ನಲ್ಲಿ ಇರುವ ಕೈ ಬರಹ ನನ್ನದಲ್ಲ ಎಂದರೆ ಸರಿಯಲ್ಲ. ನಿಪಿ.19 ಬಟ್ಟೆ ಅಮಾನತ್ತು ಮಹಜರ್ ಗೆ ಮೊದಲ ಬಾರಿಗೆ ಸಹಿ ಮಾಡಿದ್ದು, ಪಂಚರು. ನನ್ನ ಕೈ ಯಿಂದ ಬರೆದಿದ್ದ ಮಹಜರನ್ನು ನಾನು ಪಂಚರಿಗೆ ಓದಿ ಹೇಳಲಿಲ್ಲ ಬದಲಿಗೆ ತನಿಖಾಧಿಕಾರಿ ಅದನ್ನು ಪಂಚರಿಗೆ ಓದಿ ಹೇಳಿದರು.

2) ದಿಃ01.10.2020 ರಂದು 1 ನೇ ಆರೋಪಿಯ ಬಟ್ಟೆಯ ಮಹಜರ್ ಕ್ರಮವನ್ನು ಜರುಗಿಸಿದಾಗ, 2 ನೇ ಆರೋಪಿ, ಪೊಲೀಸ್ ಠಾಣೆಯ ಲಾಕಪ್ ನಲ್ಲಿ ಇದ್ದರು. 1 ನೇ ಆರೋಪಿ ಮೈ ಮೇಲೆ ಇದ್ದ ಬಟ್ಟೆಯನ್ನು ತೆಗೆದುಕೊಡುವಾಗ ಅಥವಾ 1 ನೇ ಆರೋಪಿ ಬಟ್ಟೆಯನ್ನು ಬದಲಾಯಿಸಿಕೊಳ್ಳುವಾಗ, ಇವುಗಳ ಫೋಟೋವನ್ನು ತೆಗೆದಿಲ್ಲ ಎಂದರೆ ಸರಿ. ಆ ಸಮಯದಲ್ಲಿ, ಪಂಚರ ಸಮಕ್ಷಮದಲ್ಲಿ ಮತ್ತು ನನ್ನ ಸಮಕ್ಷಮದಲ್ಲಿ ಆರೋಪಿಗಳನ್ನು ವಿಚಾರಣೆ ಮಾಡಿದ್ದಾರೆ.

1 ನೇ ಆರೋಪಿ, ಮಹಜರ್ ಕಾಲದಲ್ಲಿ ಅವನ ಮೈಮೇಲಿದ್ದ ಬಟ್ಟೆಯನ್ನು ತೆಗೆದು ನಮಗೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ, ಆ ಸಮಯದಲ್ಲಿ ಅದರ ಫೋಟೋವನ್ನು ತೆಗೆಸಿಲ್ಲ ಎಂದರೆ ಸರಿಯಲ್ಲ. ಹಾಗೂ ಸದರಿ ಮಹಜರನ್ನು ನನ್ನ ಕೈ ಬರಹದಲ್ಲಿ ನಾನು ಬರೆದಿಲ್ಲ ಎಂದರೆ ಸರಿಯಲ್ಲ.

3) ದಿಃ 06.10.2020 ರಂದು ಪಿರ್ಯಾದಿ ತಿರುಮಲ ರವರು, ಬಟ್ಟೆಯನ್ನು ಹಾಜರು ಪಡಿಸುವ ಕಾಲಕ್ಕೆ, ಅವರ ಮೈಮೇಲೆ, ಕೈಗೆ ಹಾಕಿದ್ದ ಬ್ಯಾಂಡೇಜ್ ಕಂಡು ಬಂದಿತ್ತಾ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿಯು, ಕಂಡುಬಂದಿರಲಿಲ್ಲ, ಕಾರಣ ಪಿರ್ಯಾದಿ ಇನ್ನೂ ಚಿಕಿತ್ಸೆಯನ್ನು ಪಡೆದುಕೊಂಡಿರಲಿಲ್ಲ ಎಂದು ಉತ್ತರಿಸುತ್ತಾರೆ. ದಿಃ 30.09.2020 ರಂದು ಪಿರ್ಯಾದಿ ತಿರುಮಲ ರವರು ಯಾವುದೇ ಆಸ್ಪತ್ರೆಗೆ ಹೋಗಿರಲಿಲ್ಲ ಮತ್ತು ಯಾವುದೇ ಚಿಕಿತ್ಸೆಯನ್ನು ಪಡೆದಿರಲಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿ ತಿರುಮಲ ರವರು, ಅವರ ತಂದೆಗೆ ಗಾಯಗಳಾಗಿದ್ದ ಬಟ್ಟೆಯನ್ನು ನಮಗೆ ಹಾಜರು ಪಡಿಸಿರಲಿಲ್ಲ ಎಂದರೆ ಸರಿಯಲ್ಲ ಮತ್ತು ಆ ಸಂದರ್ಭದಲ್ಲಿ ನಾವು ಯಾವುದೇ ಫೋಟೋಗಳನ್ನು ತೆಗೆದಿರಲಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಯಾದ ಶ್ರೀನಿಧಿ, 5 ನೇ ಆರೋಪಿ ಗೀತಾ ಮತ್ತು 7 ನೇ ಆರೋಪಿ ಲಕ್ಷ್ಮೀ ರವರನ್ನು ದಿಃ 01.10.2020 ರಂದು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದಾಗ ಎಷ್ಟು ಗಂಟೆ ಆಗಿತ್ತು ಎಂದು ನನಗೆ ಮಾಹಿತಿ ಇರಲಿಲ್ಲ. 5 ನೇ ಆರೋಪಿ ಗೀತಾ ಮತ್ತು 7 ನೇ ಆರೋಪಿ ಲಕ್ಷ್ಮೀ ರವರನ್ನು ಸ್ಥಳಕ್ಕೆ ಕರೆದುಕೊಂಡು ಹೋಗಬೇಕು ಎಂದಾಗ ಅವರಿಗೆ ನಮ್ಮ ಮಹಿಳಾ ಪೊಲೀಸ್ ಸಿಬ್ಬಂದಿ ಬೆಂಗಾವಲಾಗಿದ್ದರು, ಮಹಿಳಾ ಪೊಲೀಸ್ ಸಿಬ್ಬಂದಿಯ ಹೆಸರನ್ನು ಮರೆತಿದ್ದೇನೆ. ದಿಃ01.10.2020 ರಂದು ಆರೋಪಿಗಳು ನಮ್ಮನ್ನು ಸ್ಥಳಕ್ಕೆ ಕರೆದುಕೊಂಡು ಹೋದಾಗ ಮಧ್ಯಾಹ್ನ 2.20 ನಿಮಿಷ ಆಗಿತ್ತು. ಆಗ ಪಂಚರನ್ನು ತನಿಖಾಧಿಕಾರಿಯವರು ಕರೆತಂದಿದ್ದರು. ಪಂಚರ ಸಮಕ್ಷಮದಲ್ಲಿ ಆರೋಪಿಗಳ ವಿಚಾರಣೆಯನ್ನು ಮಾಡಿದರು. ಆರೋಪಿಗಳು ನಮ್ಮನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿ, ಸ್ಥಳವನ್ನು ತೋರಿಸಿದಾಗ, ಮೊದಲನೇ ಬಾರಿಗೆ ನಮ್ಮ ತನಿಖಾಧಿಕಾರಿಯವರು ಸ್ಥಳಕ್ಕೆ ಹೋದರು. ದಿಃ01.10.2020 ರಂದು ಆರೋಪಿಗಳು ನಮ್ಮನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳವನ್ನು ತೋರಿಸಿರಲಿಲ್ಲ ಎಂದರೆ ಸರಿಯಲ್ಲ ಹಾಗೂ ನಾವು ಆಗ ಯಾವುದೇ ಮಹಜರ್ ನ್ನು ಬರೆದಿಲ್ಲ ಎಂದರೆ ಸರಿಯಲ್ಲ. ಮಹಜರ್ ನನ್ನ ಬರವಣಿಗೆಯಲ್ಲಿ ಇಲ್ಲ ಎಂದರೆ ಸರಿಯಲ್ಲ. ಆರೋಪಿಗಳ ಸಮಕ್ಷಮದಲ್ಲಿ ಯಾವುದೇ ಮಹಜರ್ ನ್ನು ಬರೆದಿಲ್ಲ ಎಂದರೆ ಸರಿಯಲ್ಲ. ದಿಃ 06.10.2020 ರಂದು ನನ್ನನ್ನು ಆರೋಪಿಗಳ ಪತ್ತೆಗೆ ನೇಮಕ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಗಾಯಾಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾಗ, ನಾನು ಆಸ್ಪತ್ರೆಗೆ ಹೋಗಿ ಗಾಯಾಳುವನ್ನು ವಿಚಾರಿಸಿರಲಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಯಾವುದೇ ಸ್ಥಳಕ್ಕೆ ಹೋಗಿ ಯಾವುದೇ ಫೋಟೋಗಳನ್ನು

ತೆಗೆದಿರಲಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಯಲ್ಲಿ ಮಹಜರ್ ಗೆ ಸಹಿ ಮಾಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.